ಶ್ರೀ ವಾಟಾಳ್ ನಾಗರಾಜ.— ತಮ್ಮ ಸ್ಟೇಟುಮೆಂಟಿನಲ್ಲಿ ಸರಿಯಾಗಿಲ್ಲ. ಒಂದೊಂದು ಸಾರಿ ಒಂದೊಂದು ರೀತಿಯಾಗಿ ಹೇಳಿಕೆ ಕೊಡುತ್ತಿದ್ದೀರಿ. ಹೀಗಾದರೆ ಇದನ್ನು ಅರ್ಥಮಾಡುವುದಾದರೂ ಹೇಗೆ?

ಅಧ್ಯಕ್ಷರು.—ತಾವು ಸಭೆಯಲ್ಲಿ ಇಲ್ಲದೇ ಹೋದರೆ ನಾವೇನು ಮಾಡಲಿಕ್ಕಾಗುತ್ತದೆ? ಇದರ ಬಗ್ಗೆ ಪಿ. ಡಬ್ಲ್ಯೂ. ಡಿ. ಮಿನಿಸ್ಟರು ಆಗಲೇ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಆಗ ಇಲ್ಲಿ ನೀವು ಇರಲಿಲ್ಲ ಅವರ ಹೇಳಿಕೆ ಓದಿದರೆ ನಿಮಗೆ ಎಲ್ಲ ಗೊತ್ತಾಗುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ —ಸ್ಟೇಟ್‌ಮೆಂಟ್ ಬೇಕೆಂದು ಹೇಳಿದರು, ಅದರಂತೆ ಇಲ್ಲಿ ಸ್ಟೇಟ್‌ಮೆಂಟನ್ನು ಕೊಡಲಾಗಿದೆ ಇದರ ಬಗ್ಗೆ ಎಲ್ಲ ವಿವರಗಳನ್ನೂ ವಿವರವಾಗಿ ತಿಳಿಸಲಾಗಿದೆ. ಸುಮಿತ್ರಾ ದೇಸಾಯಿಯವರನ್ನು ಪತ್ತೆಹಚ್ಚುವ ಕಾರ್ಯವನ್ನು ಸಿ. ಬಿ. ಐ.ಗೆ ಒಪ್ಪಿಸಲಾಗಿದೆ ಎಂದು ಅನೇಕ ವೇಳೆ ಮುಖ್ಯ ಮಂತ್ರಿಗಳು ಈ ಸಭೆಯಲ್ಲೇ ಹೇಳಿದ್ದಾರೆ. ಇದುವರೆಗೆ ಸರಕಾರದ ಕಡೆಯಲ್ಲಿ ಏನು ವಿವರಗಳು ಬಂದಿವೆ ಅದನ್ನು ಸಭೆಗೆ ತಿಳಿಸಬೇಕೆಂದು ಕೇಳಿದರು. ಇದುವರೆಗೆ ಸರಕಾರದ ಬಳಿ ಇದ್ದ ವಿವರಗಳನ್ನೆಲ್ಲಾ ಸೇರಿದಂತೆ ಇಲ್ಲಿ ಒಂದು ಹೇಳಿಕೆ ಕೊಡಲಾಗಿದೆ, ಮುಖ್ಯ ಮಂತ್ರಿಗಳು ಆಗಲೇ ಎಲ್ಲವನ್ನು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.— ಇದೊಂದು ಗಂಭೀರವಾದ ಪ್ರಶ್ನೆ ಮತ್ತು ಚರಿತ್ರಾರ್ಹವಾದ ವಿಷಯ, ಮುಂದೆ ಜನರೇ ನಿಮ್ಮನ್ನು ನೋಡುತ್ತಾರೆ, ದೇಶವೂ ನಿಮ್ಮನ್ನು ನೋಡುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.— ದೇಶದಲ್ಲಿರುವ ಜನತೆ ಎಲ್ಲವನ್ನೂ ನೋಡುತ್ತದೆ. ಇದುವರೆಗೆ ನಾವು ಹೇಳಿರುವ ಎಲ್ಲ ವಿಚಾರಗಳೂ ಸ್ಟೇಟುಮೆಂಟಿನಲ್ಲಿ ವಿಶದವಾಗಿವೆ.

Sri KAGODU THIMMAPPA.—As per the statement of Sri Kittur, the Police Officer has failed to comply with his instructions.

MADAM SPEAKER.—You may imagine whatever you want. No more questions and no more answers would be permitted now. We shall now go to the next subject.

Re : Shifting of the Bus-stand located at Gandhi Square, Mysore

ಶ್ರೀ ವಾಟಾಳ್ ನಾಗರಾಜ (ಚಾಮರಾಜಪೇಟೆ) —ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿರುವ ಗಾಂಧಿ ಸ್ಕ್ವೇರಿನಲ್ಲಿ ಸುಮಾರು ನೂರಾರು ಬಸ್ಸುಗಳು ನಿಲ್ಲುವುದಕ್ಕೆ ಒಂದು ಸ್ಟ್ಯಾಂಡು ಇದೆ. ಇದನ್ನು ಈಗ ಬೇರೆಕಡೆಗೆ ವರ್ಗಾಯಿಸಬೇಕೆಂದು ಕಾರ್ಪೊರೇಷನ್ ತೀರ್ಮಾನ ಮಾಡಿದೆ ಎಂದು ನನಗೆ ಮೈಸೂರಿನಿಂದ ಬಂದ ಕೆಲವು ಜನರು ನನ್ನ ಹತ್ತಿರ ಹೇಳಿದರು. ಇದರಿಂದ ಜನತೆಗೆ ಕಷ್ಟವಾಗುತ್ತದೆ. ಈಗಿರುವ

ಗಾಂಧಿ ಸ್ಕ್ವೇರ್ ಬಳಿ ಇರುವ ಸ್ಟ್ಯಾಂಡನ್ನು ಬೇರೆ ಕಡೆಗೆ ವರ್ಗ ಮಾಡಬಾರದು. ಅದು ಈಗ ಇರುವ ಕಡೆಯಲ್ಲಿಯೆ ೀ ಇರಬೇಕು, ಇದರ ಬಗ್ಗೆ ಸರಕಾರದ ಮಂತ್ರಿಗಳು ಉತ್ತರ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಅಜೀಜ್ ಸೇಟ್.—ಮಾನ್ಯ ಅಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್‌ರವರಿಗೆ ಯಾರೋ ಮೈಸೂರಿನ ಕೆಲವು ಜನರು ಬಂದು ಮೈಸೂರಿನಲ್ಲಿರುವ ಬಸ್ ಸ್ಟ್ಯಾಂಡಿನ ವಿಷಯ ಹೇಳಿರುವುದು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತಿದೆ.

ವಾಟಾಳ್ ನಾಗರಾಜ್‌ರವರಿಗೆ ಮೈಸೂರ ಸಿಟಿಯ ಬಹುಭಾಗ ಸಂಪರ್ಕ ಇಲ್ಲ. ಅವರು ಯಾವಾಗ ಬಂದರೂ ಟೌನ್ ಹಾಲ್‌ನಲ್ಲಿ ಭಾಷಣ ಮಾಡಿ ಹೋಗುವವರು. ಗಾಂಧಿ ಸ್ಕ್ವಯರ್‌ನಲ್ಲಿ (ಚೌಕದಲ್ಲಿ) ಪ್ರೈವೇಟ್ ಬಸಸ್ ಕಾಂಟ್ರ್ಯಾಕ್ಟ್ ಕ್ಯಾರೇಜ್ಸ್ ಸುತ್ತ ನಿಂತುಕೊಂಡು ಟ್ರಾಫಿಕ್‌ಗೆ ಜಾಮ್ ಆಗುತ್ತಿತ್ತು. ಆದ್ದರಿಂದ ಮುನಿಸಿಪಲ್ ಬಸ್ ಸ್ಟ್ಯಾಂಡಿನಲ್ಲಿ ಪ್ರೈವೇಟ್ ಬಸ್‌ಸ್ ಕಾಂಟ್ರ್ಯಾಕ್ಟ್ ಕ್ಯಾರೇಜಸ್ ಎಲ್ಲಾ ಇರಲಿ ಎಂದು ಮಾಡಿದೆ. ಅದು ಕ್ಯಾಂಟೀನ್ ಬಿಲ್ಡಿಂಗ್ ಹತ್ತಿರವೇ ಇರುವುದರಿಂದ ಜನಗಳಿಗೆ ಸೌಕರ್ಯವಾಗುತ್ತದೆ. ಬಿಸಿನೆಸ್ ಓನರ್ಸ್ ಒಂದು ರೆಪ್ರಜೆಂಟೇಷನ್ ಕೊಟ್ಟಿದ್ದಾರೆ. ಬಿಸಿನೆಸ್ ಓನರ್ಸೇ ಬಂದು ವಾಟಾಳ್ ನಾಗರಾಜ್‌ರವರನ್ನು ಭೇಟಿ ಮಾಡಿರುವುದು. ಜನ ಬಂದು ಅವರನ್ನು ಭೇಟಿ ಮಾಡಿಲ್ಲ. ಕನಿಷ್ಟ ಪಕ್ಷ ನಮ್ಮ ಆಫೀಸ್ ಹತ್ತಿರ ನಿಂತುಕೊಳ್ಳುವುದಕ್ಕೆ ಅವಕಾಶ ಕೊಡಿ ಎಂದು ಅವರು ಕೇಳುತ್ತಿದ್ದಾರೆ. ನಾನು ಎಗ್ಜಾಮಿನ್ ಮಾಡಿಸುತ್ತಿದ್ದೇನೆ. ಗಾಂಧಿ ಚೌಕದಲ್ಲಿ ಅರ್ಧ ಮುಕ್ಕಾಲು ಜನ ಬಸ್ ಓನರ್ಸ್ ಆಫೀಸ ಇಟ್ಟುಕೊಂಡಿದ್ದಾರೆ. ಒಂದು ವೇಳೆ ಮದುವೆಗೆ ಹೋಗಬೇಕೆಂದರೆ the entire bus has to be booked. Therefore I do not see any reason why that particular bus should stop at Gandhi Square.

ಎಲ್ಲ ಬಸ್ಸುಗಳು ಮುನಿಸಿಪಲ್ ಬಸ್ ಸ್ಟ್ಯಾಂಡಿಗೆ ಹೋಗಲಿ ಎಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರು ಮೋಟಾರ್ ವೆಹಿಕಲ್ ಆಕ್ಟ್ ಪ್ರಕಾರ ನೋಟಿಫಿಕೇಷನ್ ಮಾಡಿದ್ದಾರೆ. First, let them honour it; let them go to the Bus stand. ಅವರು ಬಸ್ ಸ್ಟ್ಯಾಂಡಿಗೆ ಹೋಗಲಿ ಜನಗಳಿಗೆ ಏನು ಅನಾನುಕೂಲ ಆಗುತ್ತದೆ ಎಂಬುದನ್ನು ನೋಡಿ ಜನಗಳಿಗೆ ಅನಾನುಕೂಲ ಆಗುವ ಹಾಗಿದ್ದರೆ ಬಸ್ ಎಲ್ಲಿ ನಿಲ್ಲಿಸಬೇಕೆಂಬುದನ್ನು ಆಲೋಚನೆ ಮಾಡೋಣ. ಎಲ್ಲಾ ಬಸ್‌ಗಳನ್ನು ತಂದು ಗಾಂಧಿ ಚೌಕದಲ್ಲಿ ನಿಲ್ಲಿಸುವುದಕ್ಕೆ ಅವಕಾಶವಿಲ್ಲ. ಯಾರು ಬಂದಿದ್ದರೋ ಅವರಿಗೆ ಸರ್ಕಾರದ ಪರವಾಗಿ ಜನಗಳ ಹಿತಕ್ಕೋಸ್ಕರವಾಗಿ ಬಸ್ ಸ್ಟ್ಯಾಂಡಿಗೇ ಹೋಗುವುದಕ್ಕೆ ಬುದ್ಧಿವಾದ ಹೇಳಿ ಕಳುಹಿಸಿ, ಪ್ಯಾಸೆಂಜರ್ ಪಿಕ್ ಅಪ್ ಮಾಡಬೇಕಾದರೆ ರಣಜಿ ಸಿನಿಮಾ ಮಂದಿರದ ಹತ್ತಿರ ಬಸ್ ಸ್ಟಾಪ್ ಮಾಡಿ, ಪ್ರೈವೇಟ್ ಬಸ್ ನಿಲ್ಲುವ ಹಾಗೆ ಏರ್ಪಾಡು ಮಾಡೋಣ. ಗಾಂಧಿ ಚೌಕದಲ್ಲಿ ಎಲ್ಲಾ ನಿಲ್ಲಿಸಬೇಕು ಎಂದರೆ ಜನಗಳಿಗೆ ತೊಂದರೆಯಾಗುತ್ತದೆ. ತಾವು ಹೊಸ ಕಾರ್ ತೆಗೆದುಕೊಳ್ಳು

ತ್ತಿದ್ದೀರಿ, ಕಾರಿನಲ್ಲಿ ಹೋಗಬೇಕಾದರೆ ಅವಕಾಶ ಸಿಕ್ಕುವುದಿಲ್ಲ ಬಹಳ ತೊಂದರೆಯಾಗುತ್ತದೆ. ಒನ್ ವೇ ಟ್ರಾಫಿಕ್ ಮಾಡಿದ್ದೇವೆ. ದಯವಿಟ್ಟು ಬಸ್ ಓನರ್ಸ್‌ಗೆ ಬುದ್ಧಿವಾದ ಹೇಳಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

Re : Action taken on the disturbances at Mandya

ಶ್ರೀ ಕಾಗೋಡು ತಿಮ್ಮಪ್ಪ.— ಮಂಡ್ಯದಲ್ಲಿ ನಡೆದ ಘಟನೆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಚ್. ಎಂ. ಚನಬಸಪ್ಪ.— ನಮಗೆ ಬಂದಿರತಕ್ಕ ಸಮಾಚಾರ ಮಾನ್ಯ ಸಭೆಯಲ್ಲಿ ಓದುತ್ತೀನಿ. ಬಸವರಾಜು ಎನ್ನತಕ್ಕವರು, 'ಮಂಜುನಾಥ್ ಬಸ್ ಪ್ರೊಪ್ರೈಟರ್' ಅವರು ಹಸ್ತಪತ್ರಿಕೆಯನ್ನು ಹೊರಡಿಸಿದ್ದಾರೆ, ಎಂದು ಎಲಿಗೇಷನ್ ಬಂದಿದೆ. ಕನ್ನಡದಲ್ಲಿ ಕೆಂಪು ಅಕ್ಷರದಲ್ಲಿ ಪ್ರಿಂಟ್ ಮಾಡಿದ್ದಾರೆ. ಆ ಕಾಪಿಯನ್ನು ಸೀಜ್ ಮಾಡಿ, ಅವರ ಮೇಲೆ ಕ್ರೈಮ್ ನಂ. ೭೯/೭೩ ಅಂಡರ್ ಸೆಕ್ಷನ್ ೧೫೩ (ಎ) ಮತ್ತು ೨೯೫ (ಎ) ಇಂಡಿಯನ್ ಪೀನಲ್ ಕೋಡ್‌ನ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿ, ಅವರನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಕೇಸ್‌ನ್ನು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆ.

MYSORE MUNICIPAL LAWS (AMENDMENT) BILL 1973.

INTRODUCTION

Sri B. BASAVALINGAPPA (Minister for Municipal Administration) :

I beg to introduce :

"The Mysore Municipal Laws (Amendment) Bill, 1973"

Madam Speaker : The Bill is introduced.**

The Mysore Private Educational Institutions (Discipline and Control) Bill, 1973.

Motion to Consider

(Debate Contd)

†ಶ್ರೀ ಮಹೇಂದ್ರ ಕುಮಾರ ಕಲ್ಲಪ್ಪ (ಹುಲ್ಲೂರ).—ಮಾನ್ಯ ಅಧ್ಯಕ್ಷರೇ ಇವತ್ತು ಎಜ್ಯುಕೇಷನ್ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟ ಸಲುವಾಗಿ

** Bill reproduced as Annexure to this volume.